ಅರ್ಜಿಗಳನ್ನು 4-5 ವರ್ಷವಾದರೂ ಭೂ ಮಾಪನವನ್ನು ಮಾಡದೇ ಇರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಇದರಿಂತ ರೈತರಿಗೆ ಬಹಳ ತೊಂದರೆಯಾಗಿದೆ. ಇದರ ಅಳತೆಗೆ ಮಾಡಲಿಕ್ಕೆ ತಗಲುವ ಮೊಜಣಿಯ ಫೀಜನ್ನು ರೈತರೂ ತುಂಬಿದರೂ ಕೂಡ ಆ ಖಾತೆ ಸಿಬ್ಬಂದಿಯವರು ಬಂದು ಇವತ್ತು ಅಳತೆಯನ್ನು ಮಾಡುತ್ತಿಲ್ಲ. ಆದುದರಿಂದ ಅಂತಹ ಕೇಸ್‌ಗಳಲ್ಲಿ ಇವತ್ತು ಪರ್ಯಾಯ ವ್ಯವಸ್ಥೆ ಮಾಡಿ, ಕೂಡಲೇ ಸಿಬ್ಬಂದಿಯನ್ನು ಒದಗಿಸಬೇಕು. ಈ ರೀತಿಯಾಗಿ ಅಲ್ಲಿ ಭ್ರಷ್ಟಾಚಾರಕ್ಕೆ ಎಡೆಯನ್ನು ಮಾಡಿಕೊಡುತ್ತಿದ್ದೇವೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ನಿಲುವನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ. ಇದನ್ನು ನಾವು ಅರ್ಥಮಾಡಿಕೊಂಡೇ ಹೊಸದಾಗಿ ಒಂದು ಸಾವಿರ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿದ್ದೇವೆ. ವೇಕೆನ್ಸಿ ಇರತಕ್ಕದ್ದು 345 ಮಾತ್ರ. ಆದರೂ ಈ ತೊಂದರೆಯನ್ನು ನೋಡಿಕೊಂಡು fragmentation, ಎನ್‌ಕ್ರೋಚ್‌ಮೆಂಟ್, ಲ್ಯಾಂಡ್ ರೀಫಾರ್ಮ್ಸ್‌ನಲ್ಲಿ ಕೊಟ್ಟಂತಹ ಜಮೀನು ಇವುಗಳನ್ನೆಲ್ಲಾ ನೋಡಿಕೊಂಡು ಕೆಲಸ ಹೆಚ್ಚಾಗಿದೆ ಎಂದು ತಿಳಿದುಕೊಂಡು ಇವತ್ತು ನಾವು ಒಂದು ಸಾವಿರ ಪೋಸ್ಟನ್ನು ಕ್ರಿಯೇಟ್ ಮಾಡಿಕೊಂಡು ಅದನ್ನು ಭರ್ತಿ ಮಾಡಬೇಕೆನ್ನತಕ್ಕ ದೃಷ್ಟಿಯಿಂದಲೇ ಈ ಸ್ಪೆಷಲ್ ರೂಲ್ಸ್ ಮಾಡಿದ್ದೇವೆ. ಅದು ಕೂಡ ಅಪ್ರೂವಲ್ ಆಗುತ್ತದೆ. ತಕ್ಷಣ ನಾವು ಭರ್ತಿ ಮಾಡಿ ಸರಿಪಡಿಸತಕ್ಕ ವ್ಯವಸ್ಥೆ ಮಾಡುತ್ತೇವೆ.

ದೇವಸ್ಥಾನಗಳ ನಿರ್ಮಾಣ ಹಾಗೂ ದುರಸ್ತಿ ಕಾರ್ಯಕ್ಕೆ ನೀಡಿದ ಹಣದ ಮೊತ್ತ

ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ 1991-92ನೇ ಸಾಲಿಗಾಗಿ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಯಾವ ಯಾವ ಜಿಲ್ಲೆಗಳಲ್ಲಿ ದೇವಸ್ಥಾನಗಳ ನಿರ್ಮಾಣ, ದುರಸ್ತಿ ಹಾಗೂ ಕಲ್ಯಾಣ ಮಂಟಪ ಇವುಗಳ ದುರಸ್ತಿ ಇತ್ಯಾದಿಗಳಿಗಾಗಿ ನೀಡಿರುವ ಹಣವೆಷ್ಟು?

ಆ) ಗುಲ್ಬರ್ಗಾ ಜಿಲ್ಲೆಯ ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಹಣ ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) ;

ಇ) ಈ ಕೆಲಸಗಳು ಯಾವ ಹಂತದಲ್ಲಿ ಇವೆ ಹಾಗೂ ಒಂದು ವೇಳೆ ಪೂರ್ತಿಯಾಗದಿದ್ದರೆ ಅವುಗಳನ್ನು ಪೂರ್ಣಗೊಳಿಸಲು ಅನುದಾನ ನೀಡುವ ವ್ಯವಸ್ಥೆ ಮಾಡಲಾಗಿದೆಯೇ?

ಈ) ಮಾಡಿದ್ದರೆ ಆ ದೇವಸ್ಥಾನಗಳು ಯಾವುದು?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು) :

ಅ) ದುರಸ್ತಿ ಮತ್ತು ಜೀರ್ಣೋದ್ಧಾರಕ್ಕೆ ರೂ. 31.00 ಲಕ್ಷಗಳನ್ನು ಹಾಗೂ ಕಲ್ಯಾಣ ಮಂಟಪ ಮತ್ತು ದೇವಸ್ಥಾನಗಳ ನಿರ್ಮಾಣದ ಸಲುವಾಗಿ ರೂ. 43.05 ಲಕ್ಷಗಳನ್ನು 1991-92ನೇ ಸಾಲಿನಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವತಿಯಿಂದ ನೀಡಿದೆ.

ಆ) ಪಟ್ಟಿ ಲಗತ್ತಿಸಿದೆ.

ಇ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ ಎನ್ನುವ ಮಾಹಿತಿಗಳು ತಕ್ಷಣ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಸರ್ಕಾರದಿಂದ ಈಗಾಗಲೇ ಮಂಜೂರು ಮಾಡಿರುವ ಹಣವನ್ನು ಬಳಸಿಕೊಂಡು ಅದಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ದೇವಸ್ಥಾನ / ಸಂಸ್ಥೆಗಳವರು ನೀಡಬೇಕಾಗುತ್ತದೆ. ಆದೂ ಅಲ್ಲದೆ ಸರ್ಕಾರದಿಂದ ನೀಡಿರುವ ನಿರ್ದೇಶನದಂತೆ ಶೇಕಡಾ 50 ರಷ್ಟು ಹಣವನ್ನು ದೇವಸ್ಥಾನದ ನಿಧಿಯಿಂದಾಗಲೀ ಇಲ್ಲವೇ ಸಾರ್ವಜನಿಕ ವಂತಿಕೆಯಿಂದಾಗಲೀ ಭರಿಸಬೇಕಾಗುತ್ತದೆ. ಈ ಮೇಲಿನ ಷರತ್ತುಗಳನ್ನು ಪೂರೈಸಿದ ನಂತರ ಸರ್ಕಾರಕ್ಕೆ ಅನುದಾನಕ್ಕಾಗಿ ಮನವಿ ಸಲ್ಲಿಸಿದಲ್ಲಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

ಸರ್ಕಾರೀ ಆದೇಶದ ಸಂ. ಕಂಇ 150:ಮುಭೂಅ 90, ದಿನಾಂಕ 31-10-1991

ತಾಲ್ಲೂಕ್	ಸಂಸ್ಥೆಯ ಹೆಸರು	ಮಂಜೂರಾದ ಮೊಬಲಗು
ಸುರಪುರ ತಾ.	ಶ್ರೀ ಶರಣ ಗೊಳೇಶ್ವರ ದೇವಸ್ಥಾನ ಸೂಗೂರು, ಸುರಪುರ ತಾಲ್ಲೂಕ್	10,000-00
	ಶ್ರೀ ದ್ಯಾಮಪ್ಪ ದೇವಸ್ಥಾನ, ಯಮನೂರು ಸುರಪುರ ತಾಲ್ಲೂಕ್	15,000-00
	ಶ್ರೀ ಉಚ್ಚಪಿಡ್ಡಯ್ಯ ದೇವಸ್ಥಾನ, ಮಾನಗುಂಡಾಲ ಗ್ರಾಮ ಸುರಪುರ ತಾಲ್ಲೂಕ್	10,000-00
	ಶ್ರೀ ನೀಲಕಂಠರಾಯ ದೇವಸ್ಥಾನ, ನೀಲಕಂಠ ಗಟ್ಟಿ ಗ್ರಾಮ ಸುರಪುರ ತಾಲ್ಲೂಕ್	10,000-00
	ಶ್ರೀ ನೀಲಕಂಠರಾಯ ದೇವಸ್ಥಾನ, ನೀಲಕಂಠ ಗಟ್ಟಿ, ಗ್ರಾಮ ಸುರಪುರ ತಾಲ್ಲೂಕ್	10,000-00
		55,000-00
ಯಾದಗಿರಿ ತಾ.	ಶ್ರೀ ಹನುಮಾನ್ ದೇವಸ್ಥಾನ, ರಾಣಿಗುರದಿ ಗ್ರಾಮ ಯಾದಗಿರಿ ತಾಲ್ಲೂಕ್	10,000-00
	ಶ್ರೀ ವೀರಭದ್ರೇಶ್ವರ ದೇವಸ್ಥಾನ, ಚಂದ್ರಕೆ ಗ್ರಾಮ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ್ ದೇವರ ಗುಡಿ, ಮುನಗಲ್ ಗ್ರಾಮ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ್ ದೇವಸ್ಥಾನ, ಹೂರುಂಚಾ ಗ್ರಾಮ ಯಾದಗಿರಿ ತಾಲ್ಲೂಕ್	10,000-00

	ಶ್ರೀ ಹನುಮಾನ ದೇವಸ್ಥಾನ, ಕ್ಯಾಸಪ್ಪನಹಳ್ಳಿ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಸೂರೇಶ್ವರ ದೇವಸ್ಥಾನ, ವನಗೇರ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ ದೇವಸ್ಥಾನ, ಕಟ್ಟಿಗೆ ಸಹಪುರ ಯಾದಗಿರಿ ತಾಲ್ಲೂಕ್	10,000-00
	ಶ್ರೀ ಹನುಮಾನ ದೇವಸ್ಥಾನ, ಬಾಚಾರ್ ಗ್ರಾಮ	10,000-00
	ಶ್ರೀ ರಾಮಲಿಂಗೇಶ್ವರ ದೇವಸ್ಥಾನ, ಕೋಟೆ ರಾಮಲಿಂಗೇಶ್ವರ ಮಠ, ಯಾದಗಿರಿ ತಾಲ್ಲೂಕ್	10,000-00
		90,000-00
ಜೇವರ್ಗಿ ತಾ.	ಶ್ರೀ ದ್ಯಾಮವ್ವ ದೇವಿ ದೇವಸ್ಥಾನ, ನರಬೋಳಿ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಹನುಮಾನ ದೇವಸ್ಥಾನ, ಬಡಗೇರಿ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಹನುಮಾನ ಮಂದಿರ, ಗೌನಹಳ್ಳಿ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಯಲ್ಲಮ್ಮ ದೇವಸ್ಥಾನ, ಕೊಲ್ಲೂರು ಗ್ರಾಮ, ಜೇವರ್ಗಿ ತಾಲ್ಲೂಕ್	10,000-00
	ಶ್ರೀ ಜೀರಲಿಂಗೇಶ್ವರ ದೇವಸ್ಥಾನ, ಕೊಂಡಗೊಳಿ ಗ್ರಾಮ ಜೇವರ್ಗಿ ತಾಲ್ಲೂಕ್	10,000-00
		50,000-00
ಗುಲ್ಬರ್ಗಾ ತಾ.	ಶ್ರೀ ರೇವಣಸಿದ್ದೇಶ್ವರ ಮಠ, ಬ್ರಹ್ಮಪುರ, ಗುಲ್ಬರ್ಗಾ	10,000-00
		10,000-00
ಆಳಂದ ತಾ.	ಶ್ರೀ ಶರಣಬಸವೇಶ್ವರ ದೇವಸ್ಥಾನ, ದಂಗಾಪುರ ಆಳಂದ ತಾಲ್ಲೂಕ್	25,000-00
		25,000-00
ಚಿತ್ತಾಪುರ ತಾ.	ಶ್ರೀ ಶಿವಯೋಗೀಶ್ವರ ದೇವಸ್ಥಾನ, ದೇವನತೇಗನೂರು ಗ್ರಾಮ, ಚಿತ್ತಾಪುರ ತಾಲ್ಲೂಕ್	10,000-00
		10,000-00
ಶಹಪುರ ತಾ.	ಶ್ರೀ ದಂಡಗುಂಡ ಬಸವಣ್ಣ ದೇವಸ್ಥಾನ ಗೋಗಿಪೇಥ, ಶಹಪುರ ತಾಲ್ಲೂಕ್	10,000-00
		10,000-00

ಸರ್ಕಾರಿ ಆದೇಶದ ಸಂಖ್ಯೆ : ಕಂಇ 168 ಮುಭೂಅ 91, ದಿನಾಂಕ 31-10-1991

ಕ್ರಮ ಸಂಖ್ಯೆ	ತಾಲ್ಲೂಕು	ಸಂಸ್ಥೆಯ ಹೆಸರು	ಮಂಜೂರಾದ ಮೊಬಲಗು
	ಚಿಂಚೋಳಿ ತಾಲ್ಲೂಕು		
1)		ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಸರಸಾಂಬ ಗ್ರಾಮ, ಚಿಂಚೋಳಿ ತಾಲ್ಲೂಕು	25,000-00
2)		ಶ್ರೀ ರೇವಣಸಿದ್ದೇಶ್ವರ ದೇವಾಲಯ ರಥಕಲ್ ಗ್ರಾಮ, ಚಿಂಚೋಳಿ ತಾಲ್ಲೂಕು	25,000-00
			50,000-00
	ಯಾದಗಿರಿ ತಾಲ್ಲೂಕು		
1)		ಶ್ರೀ ವಾಲ್ಮೀಕಿ ದೇವಸ್ಥಾನ, ಯಾದಗಿರಿ ನಗರ	50,000-00
2)		ಶ್ರೀ ದಿಗ್ವಿದೇಶ್ವರ ದೇವಸ್ಥಾನ, ಕನ್ನಗೇರ ಯಾದಗಿರಿ ತಾಲ್ಲೂಕು	20,000-00
			70,000-00
	ಸುರಪುರ ತಾಲ್ಲೂಕು		
1)		ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ ಸುರಪುರ ತಾಲ್ಲೂಕು	50,000-00
2)		ಶ್ರೀ ಹುಲಿಗಮ್ಮ ದೇವಸ್ಥಾನ, ಶೆಟ್ಟಿ ಮೊಹಲ್ಲಾ ಸುರಪುರ ತಾಲ್ಲೂಕು	15,000-00
			65,000-00
	ಅಳಂದ ತಾಲ್ಲೂಕು		
1)		ಶ್ರೀ ಅಜಾತ್ ಮಹಾರಾಜ ಮಂದಿರ ಬೆಣ್ಣೆ ಶಿರೂರು ಗ್ರಾಮ, ಅಳಂದ ತಾಲ್ಲೂಕು	10,000-00
			10,000-00
	ಶಹಪುರ ತಾಲ್ಲೂಕು		
1)		ಶ್ರೀ ಹನುಮಾನ್ ದೇವಸ್ಥಾನ ಭೂಮಿ ಕಾಡಂಗೇರಾ, ಶಹಪುರ ತಾಲ್ಲೂಕು	20,000-00
			20,000-00

ಶ್ರೀ ಬಸವಂತರೆಡ್ಡಿ-ಮೋತಕಪಲ್ಲಿ : ಮಾನ್ಯ ಉಪಾಧ್ಯಕ್ಷೀಣಿಯವರೆ, ನನ್ನ 'ಅ' ಎಂಬ ಪ್ರಶ್ನೆಗೆ ಉತ್ತರ ಈ ರೀತಿ ಇದೆ. ಕರ್ನಾಟಕ ರಾಜ್ಯದ ದೇವಸ್ಥಾನಗಳ ದುರಸ್ತಿ ಜೀರ್ಣೋದ್ಧಾರಕ್ಕೆ ರೂಪಾಯಿ 31 ಲಕ್ಷ ಮತ್ತು 43 ಲಕ್ಷ 1991-92ರ ಸಾಲಿಗೆ ಧಾರ್ಮಿಕ ದತ್ತಿ ಇಲಾಖೆಯವರು ನೀಡಿದ್ದಾರೆ. ಇದರಿಂದ ಪ್ರತಿ ಜಿಲ್ಲೆಗೆ ಸುಮಾರು 4 ಲಕ್ಷ ರೂಪಾಯಿ ಬಂದಂತಾಗುತ್ತದೆ. ಆದರೆ ಗುಲ್ಬರ್ಗ ಜಿಲ್ಲೆಗೆ ಕೇವಲ 2.5 ಲಕ್ಷ ರೂಪಾಯಿಯನ್ನು ಅನುದಾನವನ್ನು ನೀಡಿದ್ದು ಏಕೆ? ಮುಂದಾದರೂ ಸಹ ಹೈದರಾಬಾದ್ ಕರ್ನಾಟಕವಾದ ಹಿಂದುಳಿದ ಪ್ರದೇಶವನ್ನು ಕಡೆಗಣಿಸಬಾರದೆಂದು ತಮ್ಮ ಮುಖಾಂತರ ಮಂತ್ರಿಯವರನ್ನು ವಿನಂತಿಸುತ್ತೇನೆ.

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷೀಣಿಯವರೆ, 1991-92ರ ಸಾಲಿನಲ್ಲಿ ಜೀರ್ಣೋದ್ಧಾರಕ್ಕಾಗಿ 31 ಲಕ್ಷ ರೂಪಾಯಿಯನ್ನು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 43 ಲಕ್ಷ ರೂಪಾಯಿಯನ್ನು ಈಗಾಗಲೇ ಅನುದಾನವನ್ನಾಗಿ ಬಿಡುಗಡೆ ಮಾಡಲಾಗಿದೆ. ಆದರಲ್ಲಿ ಗುಲ್ಬರ್ಗ ಜಿಲ್ಲೆಗೆ ಜೀರ್ಣೋದ್ಧಾರಕ್ಕಾಗಿ 2.5 ಲಕ್ಷ ರೂಪಾಯಿಯನ್ನು ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 2.15 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಲಾಗಿದೆ. ಬೇಡಿಕೆ ಬಂದರೆ ಮತ್ತು ಪ್ರಸ್ತಾವನೆಯನ್ನು ಪರಿಗಣಿಸಿ ತದನಂತರ ಮತ್ತೊಂದು ಸಾರಿ ಅನುದಾನದ ಪಟ್ಟಿಯನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ : ಮಾನ್ಯ ಉಪಾಧ್ಯಕ್ಷೀಣಿಯವರೆ, 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಗುಲ್ಬರ್ಗ ಜಿಲ್ಲೆಯ ದೇವಸ್ಥಾನಗಳ ರಿಪೇರಿ, ಜೀರ್ಣೋದ್ಧಾರಕ್ಕಾಗಿ ನೀಡಿರುವ ಹಣದಲ್ಲಿ ತಾಲ್ಲೂಕುವಾರು ವರದಿಯನ್ನು ಕೊಟ್ಟಿದ್ದಾರೆ. ಆದರಲ್ಲಿ ನಮ್ಮ ಸೇಡಂ ತಾಲ್ಲೂಕನ್ನು ಕಡೆಗಣಿಸಲಾಗಿದೆ. ಸೇಡಂ ತಾಲ್ಲೂಕಿಗೆ ಹಣವನ್ನು ನೀಡಿಲ್ಲ. ಮತ್ತು ನಾನು 1991-92ನೇ ಸಾಲಿನಲ್ಲಿ ಸೇಡಂ ತಾಲ್ಲೂಕಿನಲ್ಲಿರುವ ಪುರಾತನ ಹಾಗೂ ಪ್ರಖ್ಯಾತ ದೇವಸ್ಥಾನಗಳಿಗೆ ಜೀರ್ಣೋದ್ಧಾರ ಹಣವನ್ನು ನೀಡಲು ಕೋರಿದ್ದೆ. ಆದರೆ ಏತಕ್ಕೆ ಇನ್ನು ಹಣವನ್ನು ನೀಡಿಲ್ಲ?

ಶ್ರೀ ರಾಜಾ ಅಮರೇಶ್ವರ ನಾಯಕ : ಮಾನ್ಯ ಉಪಾಧ್ಯಕ್ಷೀಣಿಯವರೆ, ಶಾಸಕರಿಂದ, ಗ್ಯರಿಂದ ಮತ್ತು ಸಾರ್ವಜನಿಕರಿಂದ ಬಂದಂಥ ಪ್ರಸ್ತಾವನೆಗಳನ್ನು ಪರಿಗಣಿಸಿ ಅನುದಾನ ನೀಡಲಾಗುತ್ತಿದೆ. ಅದೇ ರೀತಿ ಗುಲ್ಬರ್ಗ ಜಿಲ್ಲೆಯ ಅನೇಕ ತಾಲ್ಲೂಕುಗಳಿಗೆ ನೀಡಿದ್ದೇವೆ. ಮತ್ತು ಸೇಡಂ ತಾಲ್ಲೂಕಿಗೆ ಅಚಾತುರ್ಯವಾಗಿ ಹಣ ಹೋದ ಪಟ್ಟಿಯಲ್ಲಿಲ್ಲದಿದ್ದರೆ, ನಂತರ ಹಣವನ್ನು ಬಿಡುಗಡೆ ಮಾಡತಕ್ಕಂಥಾದ್ದರ ಬಗ್ಗೆ ಅವರ ಕೋರಿಕೆಯನ್ನು ಮನ್ನಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಯೋಜನೆಯಡಿಯಲ್ಲಿ ಈ ಒಂದು ಪ್ರೋಗ್ರಾಂ ಬಳಸಬಾರದೆಂದು ಕ್ಷೇತ್ರವಾರು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ.

ವಾರಣಾಸಿ ಛತ್ರದ ನಿರ್ವಹಣೆ

254 (1594) ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ವಾರಣಾಸಿಯ ಛತ್ರದಲ್ಲಿ ಯಾತ್ರಿಕರಿಗೆ ತಂಗುವ ವ್ಯವಸ್ಥೆ ಸರಿಯಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಛತ್ರದ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆ ತಯಾರಿಸಿದೆಯೇ?